## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**–2019–20ನೇ ಸಾಲಿನಲ್ಲಿ ಮೊದಲನೇ ಕಂತಿನ ಹಣ ಬಿಡುಗಡೆಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಬಗ್ಗೆ.

**ಓದಲಾಗಿದೆ:–**

1. ಸರ್ಕಾರದ ಆದೇಶ ಸಂಖ್ಯೆ: ಆಇ 11 ಟಿಎಫ್‌ಪಿ 2007 ದಿನಾಂಕ: 27.11.2007
2. ಸರ್ಕಾರದ ಆದೇಶ ಸಂಖ್ಯೆ: ಪಿಡಿ14 ಐಎಂಎಂ 2017 ದಿನಾಂಕ: 23.3.2017
3. ಅಧಿಕೃತ ಜ್ಞಾಪನ ಸಂಖ್ಯೆ: ಸಂಖ್ಯೆ:ಆಇ 18 ಬಿಪಿಇ 2018 ದಿನಾಂಕ: 19.3.2019
4. ಸರ್ಕಾರದ ಆದೇಶ ಸಂಖ್ಯೆ: ಆಇ 04 ಝಡ್‌ಪಿಎ 2013 ದಿನಾಂಕ 10.4.2013 ಹಾಗೂ ಸೇರ್ಪಡೆ ಆದೇಶ ಸಂಖ್ಯೆ:ಆಇ 4 ಝಡ್‌ಪಿಎ 2013 ದಿನಾಂಕ: 1.4.2016

**ಪ್ರಸ್ತಾವನೆ:–**

ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶಗಳ ಮೂಲಕ ಆಡಳಿತ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗುತ್ತಿದೆ.

2019–20ನೇ ಸಾಲಿನಲ್ಲಿಯೂ ಆಡಳಿತ ಇಲಾಖೆಗಳಿಗೆ ಹಣ ಬಿಡುಗಡೆಗೊಳಿಸಲು ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ನು ಮುಂದುವರಿಸುವ ಅಗತ್ಯವಿದ್ದು, ಜೊತೆಗೆ, ಆಡಳಿತ ಇಲಾಖೆಗಳು ಈ ಆರ್ಥಿಕ ಪ್ರತ್ಯಾಯೋಜನೆಯನ್ನು ಅದೇ ಉದ್ದೇಶ ಹಾಗೂ ಸ್ಫೂರ್ತಿಯಿಂದ ಚಲಾಯಿಸುವುದನ್ನು ಖಚಿತಪಡಿಸಿಕೊಳ್ಳಬೇಕಿದೆ.ಅಧಿಕಾರ ಪ್ರತ್ಯಾಯೋಜನೆಯ ಉದ್ದೇಶವು, ಅನುದಾನವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದಾಗಿರುವುದರಿಂದ, ರಾಜ್ಯ ಯೋಜನೆಗಳು ಮತ್ತು ಇತರೆ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ಮೊದಲು, ಇಲಾಖೆಗಳು ಕೆಲವು ಆಡಳಿತಾತ್ಮಕ ಪರಿಶೀಲನೆಗಳನ್ನು ಮಾಡುವುದು ಅವಶ್ಯವಾಗಿದೆ. ಆದುದರಿಂದ ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ.

ಈ ಆದೇಶವು, 2019–20ನೇ ಸಾಲಿಗೆ ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚಗಳನ್ನು ಬಿಡುಗಡೆ ಮಾಡುವುದಕ್ಕೆ ಅನ್ವಯವಾಗುತ್ತದೆ. ಈ ಆದೇಶದಲ್ಲಿರುವ ಅಧಿಕಾರ ಪ್ರತ್ಯಾಯೋಜನೆಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು ಚಲಾಯಿಸತಕ್ಕದ್ದೇ ಹೊರತು ಪುನರ್ ಪ್ರತ್ಯಾಯೋಜನೆ ಮಾಡತಕ್ಕದ್ದಲ್ಲ.

**ಸರ್ಕಾರದ ಆದೇಶ ಸಂ:ಎಫ್‌ಡಿ 1 ಟಿಎಫ್‌ಪಿ 2019, ದಿನಾಂಕ: 03.04.2019.**

**ಭಾಗ–I ಆಡಳಿತಾತ್ಮಕ ಅನುಮೋದನೆ:**

1. ಒಂದು ಆರ್ಥಿಕ ವರ್ಷದಲ್ಲಿ ಮುಂದುವರಿದ ಅಥವಾ ಹೊಸ ಯೋಜನೆಗಳೆಂದು ಅನುಮೋದನೆಗೊಂಡಿರುವ ಯೋಜನೆಗಳಿಗೆ ಮಾತ್ರ ಹಣವನ್ನು ಆಡಳಿತ ಇಲಾಖೆಗಳು ಬಿಡುಗಡೆಗೊಳಿಸಬಹುದಾಗಿದೆ. ಮೇಲೆ (2) ರಲ್ಲಿ ಉಲ್ಲೇಖಿಸಲಾದ ಆದೇಶದಲ್ಲಿ ಹೊಸ ಅಂಶಗಳ ಸೇರ್ಪಡೆ ಅಥವಾ ಬದಲಾವಣೆ ಸೇರಿದಂತೆ ಮುಂದುವರೆದ ಯೋಜನೆಗಳ ಮತ್ತು ಹೊಸ ಯೋಜನೆಗಳ ಅನುಮೋದನೆಗೆ ಮತ್ತು ಉಸ್ತುವಾರಿಗೆ ವಿವರವಾದ ಮಾರ್ಗ ಸೂಚಿಗಳೊಂದಿಗೆ ಕಾರ್ಯವಿಧಾನಗಳನ್ನು ಯೋಜನಾ ಇಲಾಖೆಯು ಗೊತ್ತುಪಡಿಸಿದೆ. 2019–20ನೇ ಸಾಲಿನಲ್ಲಿ ಯೋಜನಾ ಇಲಾಖೆಯು ಈ ಬಗ್ಗೆ ಮಾರ್ಗದರ್ಶನ/ಸೂಚನೆಗಳನ್ನು ನೀಡಿದಲ್ಲಿ ಅದನ್ನೂ ಸಹ ಓದಿಕೊಳ್ಳಲು ತಿಳಿಸಿದೆ.

2. ಆಡಳಿತಾತ್ಮಕ ಅನುಮೋದನೆಯ ಆದೇಶವನ್ನು ಹಣ ಬಿಡುಗಡೆಯ ಆದೇಶವೆಂದು ಪರಿಭಾವಿಸತಕ್ಕದ್ದಲ್ಲ. ಅನುಮೋದನೆಯಾಗಿರುವ ವಿವಿಧ ಯೋಜನೆಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ವಯ ಹಣ ಬಿಡುಗಡೆ ಮಾಡುವ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಬೇಕಾಗುತ್ತದೆ.

3. ಕಾಮಗಾರಿ ಅಂದಾಜುಗಳ ಅನುಮೋದನೆಗೆ ರೂ.10.00 ಕೋಟಿಗಳವರೆಗೆ ಮತ್ತು ಸರಕು ಹಾಗೂ ಸೇವೆಗಳ ಸಂಗ್ರಹಣೆಗೆ ರೂ.5.00 ಕೋಟಿಗಳವರೆಗೆ ಆರ್ಥಿಕ ಇಲಾಖೆಯ ಅನುಮೋದನೆ ಇದೆಯೆಂದು ಭಾವಿಸಿ ಆಡಳಿತಾತ್ಮಕ ಅನುಮೋದನೆಯನ್ನು (ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸುವ ಷರತಿಗೊಳಪಟ್ಟು) ನೀಡಬಹುದಾಗಿದೆ.

**ಭಾಗ–II ಹಣ ಬಿಡುಗಡೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯಿಂದ ನಿರ್ದಿಷ್ಟವಾಗಿ ಅನುಮೋದನೆ ಪಡೆಯಬೇಕಾಗಿರುವ ಪ್ರಕರಣಗಳು:**

4. ಈ ಆದೇಶದ ಅನುಬಂಧ–1ಎ, 1ಬಿ, 1ಸಿ ಮತ್ತು 1ಡಿ ಯಲ್ಲಿ ವರ್ಗೀಕರಿಸಲಾಗಿರುವ ಯೋಜನೆಗಳಿಗೆ ವರ್ಷದ ಯಾವುದೇ ಅವಧಿಯಲ್ಲಾಗಲೀ ಅಥವಾ ಎಷ್ಟೇ ಮೊತ್ತವನ್ನಾಗಲೀ, ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

5. ಪೂರಕ ಅಂದಾಜುಗಳಲ್ಲಿ ರೂ.10.00 ಕೋಟಿ ಮತ್ತು ಅದಕ್ಕೂ ಹೆಚ್ಚಿನ ಅನುದಾನ ಒದಗಿಸಿದ್ದಲ್ಲಿ, ಅಂತಹವುಗಳಿಗೆ ಆರ್ಥಿಕ ಇಲಾಖೆಯ ಅನುಮೋದನೆ ಕಡ್ಡಾಯವಾಗಿರುವುದರಿಂದ ಈ ಆದೇಶದ ಭಾಗ IV ಅನ್ವಯವಾಗುವುದಿಲ್ಲ.

**ಷೇರು ಬಂಡವಾಳ ಹೂಡಿಕೆ ಮತ್ತು ಸಾಲಗಳು:**

6. ಕರ್ನಾಟಕ ಸರ್ಕಾರದ (ವ್ಯವಹಾರಗಳ ನಿರ್ವಹಣೆ) ನಿಯಮಗಳು, 1977ರಲ್ಲಿ ವಿಧಿಸಿರುವ ನಿಯಮಗಳನ್ನು ಮತ್ತು ಆರ್ಥಿಕ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂ:ಎಫ್‌ಡಿ: 1 ಬಿಎಲ್‌ಎ 2013, ದಿ:26.11.2013 ಆದೇಶದಲ್ಲಿನ ಸೂಚನೆಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ಹಾಗೂ ಆಡಳಿತ ಇಲಾಖೆಗಳು ಇದುವರೆಗೆ ಬಿಡುಗಡೆಯಾಗಿರುವ ಷೇರು ಬಂಡವಾಳವು ಅಧಿಕೃತ ಷೇರು ಬಂಡವಾಳದ ಮಿತಿಯನ್ನು ಮೀರದಿರುವುದನ್ನು ಹಾಗೂ ಷೇರು ಬಂಡವಾಳದ ರಾಜ್ಯದ ಪಾಲು ಷೇರುದಾರರ ಒಪ್ಪಂದದ ಪ್ರಕಾರ ಇರುವುದನ್ನು ಖಚಿತಪಡಿಸಿಕೊಳ್ಳುವ ಷರತ್ತಿಗೊಳಪಟ್ಟು ರೂ.10.00 ಕೋಟಿಯೊಳಗೆ ಆಯವ್ಯಯ ಅನುದಾನ ಲಭ್ಯವಿದ್ದಲ್ಲಿ, ಆಯವ್ಯಯ ಅವಕಾಶದವರೆಗೆ, ಆರ್ಥಿಕ ಇಲಾಖೆಯ ಅನುಮೋದನೆ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಷೇರು ಬಂಡವಾಳವನ್ನು ಒಂದು ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಬಹುದಾಗಿದೆ.ರೈಲ್ವೆ ಯೋಜನೆಗಳಿಗೆ ರಾಜ್ಯ ಸರ್ಕಾರದ ಷೇರು ಬಂಡವಾಳವನ್ನು ಆಯವ್ಯಯ ಅಂದಾಜುಗಳ ಶೇ.25 ರವರೆಗೆ ಆರ್ಥಿಕ ಇಲಾಖೆಯ ಅನುಮೋದನೆ ಇದೆ ಎಂದು ಭಾವಿಸಿ ಬಿಡುಗಡೆ ಮಾಡಬಹುದಾಗಿದೆ. ಒಂದು ವರ್ಷದಲ್ಲಿ ರೂ.10.00 ಕೋಟಿಗಿಂತ ಹೆಚ್ಚಿನ ಷೇರು ಬಂಡವಾಳವನ್ನು ಹಾಗೂ ಎಷ್ಟೇ ಮೊತ್ತದ ಸಾಲವನ್ನಾಗಲೀ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಪೂರ್ವಾನುಮೋದನೆ ಪಡೆಯಬೇಕಾಗುತ್ತದೆ.

**ಭಾಗ-III ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಹಣ ಬಿಡುಗಡೆ ಮಾಡಬಹುದಾದ ಪ್ರಕರಣಗಳು:**

7. ಅನುಬಂಧ-2 ರಲ್ಲಿ ಪಟ್ಟಿ ಮಾಡಲಾದ ಬಾಬ್ತುಗಳಿಗೆ ಸಂಬಂಧಿಸಿದಂತೆ, ಆಯವ್ಯಯ ಅವಕಾಶದವರೆಗೆ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಹಣವನ್ನು ಬಿಡುಗಡೆ ಮಾಡಬಹುದಾಗಿದೆ. ಈ ಯೋಜನೆಗಳ ಕೆಲವು ನಿರ್ದಿಷ್ಟ ಬಾಬ್ತುಗಳಡಿ, ಸಾಮಾಜಿಕ ಭದ್ರತಾ ಪಿಂಚಣಿ ಪಾವತಿಗಳೂ ಸೇರಿದಂತೆ, ಆಯವ್ಯಯ ಅವಕಾಶಕ್ಕಿಂತ ಹೆಚ್ಚುವರಿಯಾಗಿ ಹಣ ಬಿಡುಗಡೆ ಮಾಡಬೇಕಾದ ಸಂದರ್ಭದಲ್ಲಿ ಕೇವಲ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಮಾತ್ರ ಮಾಡಬಹುದಾಗಿದೆ.
8. ಹಾಗೆಯೇ, ಲೋಕಸಭಾ ಚುನಾವಣೆ ಏಪ್ರಿಲ್ ತಿಂಗಳಿನಲ್ಲಿ ನಡೆಯುವುದರಿಂದ ಚುನಾವಣೆ ಬಾಬ್ತು ಆಯವ್ಯಯದಲ್ಲಿ ಸಿ.ಆ.ಸು.ಇ ಅಭಿಯಾಚನೆಯಡಿ ಒದಗಿಸಿರುವ ಹಣವನ್ನು ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಲು ಪೂರ್ಣ ಅಧಿಕಾರ ನೀಡಿದೆ.

**ರೂ.10.00ಕೋಟಿಗಳಿಗಿಂತ ಕಡಿಮೆ ಆಯವ್ಯಯ ಅವಕಾಶವಿರುವ ರಾಜ್ಯ ಯೋಜನೆಗಳು:**

9. ರೂ.10.00ಕೋಟಿಗಳವರೆಗೆ ಆಯವ್ಯಯ ಅವಕಾಶವಿರುವ ರಾಜ್ಯ ಯೋಜನೆಗಳಿಗೆ ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಆಯವ್ಯಯದಲ್ಲಿರುವ ಮೊತ್ತವನ್ನು ಕನಿಷ್ಟ ಎರಡು ಕಂತುಗಳಲ್ಲಿ ಆಡಳಿತ ಇಲಾಖೆಯು ಬಿಡುಗಡೆಗೊಳಿಸಬಹುದು. ಮೊದಲನೆಯ ಕಂತನ್ನು

ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಶೇ 50 ರವರೆಗೆ ಬಿಡುಗಡೆ ಮಾಡಬಹುದಾಗಿದೆ. ಬಾಕಿ ಶೇ 50 ರಷ್ಟನ್ನು ಪ್ರಾರಂಭಿಕ ಶಿಲ್ಕಿನ ಮೊತ್ತವೂ ಸೇರಿದಂತೆ ಈ ಯೋಜನೆಗಾಗಿ ಬಿಡುಗಡೆಗೊಳಿಸಿದ ಒಟ್ಟು ಹಣದಲ್ಲಿ ಶೇ 75 ರಷ್ಟನ್ನು ಉಪಯೋಗಿಸಿಕೊಂಡ ನಂತರ ಬಿಡುಗಡೆ ಮಾಡುವುದು.

10. ಪೂರಕ ಅಂದಾಜುಗಳ ಮೂಲಕ ಅನುಮೋದಿಸಲಾದ ಎಲ್ಲಾ ರೂ.10.00ಕೋಟಿಗಳಿಗಿಂತ ಕಡಿಮೆ ಇರುವ ಅನುದಾನಗಳನ್ನು ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಆಡಳಿತ ಇಲಾಖೆಗಳು ಬಿಡುಗಡೆ ಮಾಡಬಹುದಾಗಿದೆ.

**ಭಾಗ–IV ರೂ.10.00 ಕೋಟಿ ಮತ್ತು ಮೇಲ್ಪಟ್ಟು ಆಯವ್ಯಯ ಅವಕಾಶವಿರುವ ರಾಜ್ಯ ಯೋಜನೆಗಳು: ಮೊದಲನೇ ತ್ರೈಮಾಸಿಕದಲ್ಲಿ ಮಾಸಿಕ ಹಣ ಬಿಡುಗಡೆ:**

11. ಈ ಆದೇಶದಲ್ಲಿ ಇತರೆ ಯೋಜನೆಗಳ ಬಗ್ಗೆ ಯಾವುದೇ ವಿಧಾನಗಳನ್ನು ತಿಳಿಸಿದ್ದರೂ ಸಹ ಈ ಕೆಳಗೆ ಸೂಚಿಸಲಾದ ಯೋಜನೆಗಳಿಗೆ ಮಾಡಲಾದ ಆಯವ್ಯಯ ಅವಕಾಶದ ಹನ್ನೆರಡನೇ ಒಂದು ಭಾಗದಷ್ಟು (1/12) ಮೊತ್ತವನ್ನು ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಪ್ರತಿ ತಿಂಗಳು ಆರ್ಥಿಕ ವರ್ಷದ ಮೊದಲ ಮೂರು ತಿಂಗಳವರೆಗೆ ಆಡಳಿತ ಇಲಾಖೆಗಳು ಬಿಡುಗಡೆ ಮಾಡಬಹುದಾಗಿದೆ.

(ಎ) **ಲೋಕೋಪಯೋಗಿ ಇಲಾಖೆಯ ಎಲ್ಲಾ ಯೋಜನೆಗಳು.**

(ಬಿ) **ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ:** ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಅನುಮೋದಿಸಲಾದ ಯೋಜನೆ ಪ್ರಕಾರ ಹೆಚ್ಚುವರಿ ಆಯವ್ಯಯ ಸಂಪನ್ಮೂಲ (ಇಬಿಆರ್)ಗಳನ್ನು ಸಂಗ್ರಹಿಸುವುದಕ್ಕೆ ಒಳಪಟ್ಟು ಭಾರಿ ಮತ್ತು ಮಧ್ಯಮ ನೀರಾವರಿಯ ಎಲ್ಲಾ ಯೋಜನೆಗಳು.

ಮೇಲೆ (ಎ) ಮತ್ತು (ಬಿ) ರಲ್ಲಿರುವ ಎಸ್‌ಸಿಎಸ್‌ಪಿ–ಟಿಎಸ್‌ಪಿ ಯೋಜನೆಗಳಿಗೆ ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನಗಳ (ಹಿಂದಿನ ತಿಂಗಳುಗಳಲ್ಲಿ ಬಿಡುಗಡೆಯಾಗದೇ ಉಳಿದಿರುವ ಅನುದಾನಗಳೂ ಸೇರಿದಂತೆ) ಹನ್ನೆರಡನೇ ಒಂದು ಭಾಗವನ್ನು ಪ್ರತಿ ತಿಂಗಳೂ ಬಿಡುಗಡೆ ಮಾಡಬಹುದಾಗಿದೆ.

(ಸಿ) **ಬಿಎಂಟಿಸಿ/ಕೆಎಸ್‌ಆರ್‌ಟಿಸಿ ಸಾರಿಗೆ ಸಹಾಯಧನ:–** ಸಾರಿಗೆ ಇಲಾಖೆಯಿಂದ ಮೋಟಾರು ವಾಹನಗಳ ತೆರಿಗೆ ಬಾಕಿಗೆ ಅವಕಾಶವನ್ನು ಮಾಡಿದ ನಂತರ ಕೊಡಬೇಕಾಗಿರುವ ಮಿತಿಗೊಳಪಟ್ಟು ಆಯವ್ಯಯ ಅವಕಾಶದ ಹನ್ನೆರಡನೇ ಒಂದು (1/12) ಭಾಗವನ್ನು, ಆರ್ಥಿಕ ಇಲಾಖೆಯಿಂದ ಪ್ರತ್ಯೇಕವಾಗಿ ಕಡತದಲ್ಲಿ ಅನುಮೋದನೆ ಪಡೆದ ನಂತರ ಬಿಡುಗಡೆಗೊಳಿಸಬಹುದಾಗಿದೆ.

**(ಡಿ) ಆಹಾರ ಸಹಾಯಧನ–** ಅನ್ನಭಾಗ್ಯ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಹಾಗೂ ಮೇಲಿರುವ ಫಲಾನುಭವಿಗಳಿಗೆ ಆಹಾರಧಾನ್ಯಗಳಿಗೆ ಸಹಾಯಧನ, ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳಿಗೆ ಇತರೆ ಸಹಾಯಧನಕ್ಕೆ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಅನ್ವಯವಾಗುತ್ತದೆ.

12. ಐ.ಪಿ. ಸೆಟ್ಟುಗಳು, ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿ ಇವುಗಳಿಗೆ ಬಿಡುಗಡೆ ಮಾಡಬೇಕಾದ ಸಬ್ಸಿಡಿ ಹಣದ ಮಾಸಿಕ ಮಿತಿಯನ್ನು ಆರ್ಥಿಕ ಇಲಾಖೆಯಿಂದ ಇಂಧನ ಇಲಾಖೆಗೆ ಕಡತದಲ್ಲಿ ತಿಳಿಸಲಾಗುವುದು.

**ಮೊದಲನೇ ತ್ರೈಮಾಸಿಕದಲ್ಲಿ ತ್ರೈಮಾಸಿಕ ಕಂತಿನಲ್ಲಿ ಹಣ ಬಿಡುಗಡೆ:**

13. ಯಾವುದೇ ಯೋಜನೆ ಜಾರಿಗೊಳಿಸುವ ಏಜೆನ್ಸಿ ಬಳಿಯಿರುವ ಅಥವಾ ವೈಯಕ್ತಿಕ ಠೇವಣಿ ಖಾತೆಯಲ್ಲಿನ ಪ್ರಾರಂಭಿಕ ಮೊತ್ತವೂ ಸೇರಿದಂತೆ ಹಿಂದೆ ಬಿಡುಗಡೆ ಮಾಡಲಾದ ಮೊತ್ತದ ಶೇ.75 ರಷ್ಟನ್ನು ಉಪಯೋಗಿಸಿಕೊಂಡಿದ್ದಲ್ಲಿ ಮಾತ್ರ ಈ ಆದೇಶದ ಭಾಗ–II ರಲ್ಲಿ ಸೇರಿರದ ರೂ.10.00ಕೋಟಿ ಮತ್ತು ಮೇಲ್ಪಟ್ಟು ಆಯವ್ಯಯ ಅವಕಾಶವಿರುವ ಇತರೆ ಎಲ್ಲಾ ಯೋಜನೆಗಳಿಗೆ ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಶೇ.25 ರಂತೆ ಹಣ ಬಿಡುಗಡೆಯನ್ನು ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಮಾಡಬಹುದು.

**ಸಾಲ ಸೇವೆಗಳು:**

14. ಆಯವ್ಯಯದ ಹಣದ ಲಭ್ಯತೆಗೆ ಒಳಪಟ್ಟು ಸಾಲಗಳ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಪೂರ್ಣ ಆರ್ಥಿಕ ವರ್ಷದಲ್ಲಿ ಸಾಲ ಪಾವತಿಗಾಗಿ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಬಹುದಾಗಿದೆ.

**ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣ ಬಿಡುಗಡೆ:**

**ರಾಜ್ಯ ಯೋಜನೆಗಳು:**

15. ರಾಜ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲು ಪ್ರಸ್ತುತ ಆರ್ಥಿಕ ಇಲಾಖೆಯು ಅನುಸರಿಸುತ್ತಿರುವ ಪದ್ಧತಿಯೇ ಮುಂದುವರಿಯುತ್ತದೆ. ಹಣ ಬಿಡುಗಡೆಯ ಅನುಸೂಚಿ ಈ ಕೆಳಕಂಡಂತಿದೆ:

(i) 1ನೇ ಏಪ್ರಿಲ್ – ಏಪ್ರಿಲ್ ನಲ್ಲಿ ಪಾವತಿಯಾಗುವ ಮಾರ್ಚ್ ತಿಂಗಳ ವೇತನ, ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಿಗಾಗಿ

(ii) 1ನೇ ಜುಲೈ– ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಿಗಾಗಿ

(iii) 1ನೇ ನವೆಂಬರ್ – ನವೆಂಬರ್, ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ತಿಂಗಳುಗಳಿಗಾಗಿ

**ಕೇಂದ್ರ ಪುರಸ್ಕೃತ ಯೋಜನೆಗಳು**

16. ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಿಗೆ ಮುಂದಿನ ಕಂಡಿಕೆ 24 ರಿಂದ ತಿಳಿಸಿರುವ ವಿಧಾನಗಳು ಅನ್ವಯವಾಗುತ್ತವೆ. ಜಿಲ್ಲಾ ವಲಯದ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಬಂಧ–3ರಲ್ಲಿ ಪಟ್ಟಿ ಮಾಡಿದೆ. ಈ ಲೆಕ್ಕ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಆಡಳಿತ ಇಲಾಖೆಗಳೇ ಬಿಡುಗಡೆಗೆ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

17.ಜಿಲ್ಲಾ ಪಂಚಾಯತ್ ಲಿಂಕ್ ಪುಸ್ತಕದಲ್ಲಿ ಕೆಲವು ಯೋಜನೆಗಳಿಗೆ ಒಟ್ಟಾರೆಯಾಗಿ ಉದ್ದೇಶಿತ ಲೆಕ್ಕ ಶೀರ್ಷಿಕೆ 300 ರಡಿಯಲ್ಲಿ ಆಯವ್ಯಯ ಅವಕಾಶ ಮಾಡಲಾಗಿದೆ. ಆದರೆ, **ಅನುಬಂಧ–1** ಸಿರಲ್ಲಿ ಪಟ್ಟಿ ಮಾಡಲಾದ ಯೋಜನೆಗಳಲ್ಲಿ ಆರ್ಥಿಕ ಇಲಾಖೆಯು ಬಿಡುಗಡೆ ಮಾಡುವ ಯೋಜನೆಗಳನ್ನು ಹೊರತುಪಡಿಸಿ ಉಳಿದ ಯೋಜನೆಗಳಿಗೆ ಆರ್ಥಿಕ ಇಲಾಖೆಯ ಅನುಮೋದನೆ **ಪಡೆದೇ** ಮಾಡತಕ್ಕದ್ದು. ಉದ್ದೇಶಿತ ಲೆ.ಶೀ.300 ರಡಿ ಒದಗಿಸಿದ ಇತರೆ ಯೋಜನೆಗಳಿಗೆ ಆಡಳಿತ ಇಲಾಖೆಯೇ ಬಿಡುಗಡೆ ಮಾಡಬಹುದಾಗಿದೆ. ಈ ಒಟ್ಟಾರೆ ಅವಕಾಶಗಳು ಕೇಂದ್ರ ಪುರಸ್ಕೃತ ಯೋಜನೆ ಅಥವಾ ರಾಜ್ಯ ಯೋಜನೆಗಳಿಗೆ ಸಂಬಂಧಿಸಿರುತ್ತದೆ. ಇತರ ಯೋಜನೆಗಳಿಗೆ ಸಂಬಂಧಿಸಿದಂತೆ ಕಂಡಿಕೆ 13 ರಲ್ಲಿ ತಿಳಿಸಿರುವ ವಿಧಾನಗಳನ್ನನುಸರಿಸಿ ಬಿಡುಗಡೆ ಮಾಡಬೇಕಾಗುತ್ತದೆ. ಆದರೆ, ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕಂಡಿಕೆ 23 ರಿಂದ 26 ರವರೆಗೆ ತಿಳಿಸಿರುವ ವಿಧಾನಗಳು ಅನ್ವಯವಾಗುತ್ತವೆ.

**ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಇವುಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ:**

18.ಜಿಲ್ಲಾ ವಲಯ ಯೋಜನೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಆಡಳಿತ ಇಲಾಖೆಗಳು ಆಯಾ ಯೋಜನೆಗಳಡಿ ಮಾಡುವ ಬಿಡುಗಡೆಗೆ ಅನುಗುಣವಾಗಿ SCSP ಹಾಗೂ TSPಗೆ ಸಂಬಂಧಪಟ್ಟಂತೆ ಸಹಾ ಬಿಡುಗಡೆಯನ್ನು ಮಾಡಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು.

**ನಗರ ಸ್ಥಳೀಯ ಸಂಸ್ಥೆಗಳಿಗೆ ಹಣ ಬಿಡುಗಡೆ:**

19. ಅನುಬಂಧ–1 (ಎ)ರಲ್ಲಿನ ಯೋಜನೆಗಳನ್ನು ಹೊರತುಪಡಿಸಿ ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳ ಅನುದಾನಗಳನ್ನು ಆರ್ಥಿಕ ಇಲಾಖೆಯ ಸಹಮತಿ ಇದೆ ಎಂದು ಭಾವಿಸಿ ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಆಯವ್ಯಯ ಅವಕಾಶದ ಶೇ.25 ರಷ್ಟು ಮೊತ್ತವನ್ನು ಬಿಡುಗಡೆ ಮಾಡಬಹುದಾಗಿದೆ.

20. ರಾಜ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಈ ಆದೇಶದ ಕಂಡಿಕೆ 13 ರಲ್ಲಿ ತಿಳಿಸಿರುವ ಅಧಿಕಾರ ಹಾಗೂ ವಿಧಾನಗಳು ಅನ್ವಯಿಸುತ್ತದೆ ಹಾಗೂ ಕೇಂದ್ರ ಯೋಜನೆಗಳಿಗೆ ಸಂಬಂಧಿಸಿದಂತೆ ಕಂಡಿಕೆ–23 ರಿಂದ 26 ರವರೆಗಿನ ವಿಧಾನಗಳು ಹಾಗೂ ಸಾಲ ಸೇವೆಗಳಿಗೆ ಸಂಬಂಧಿಸಿದಂತೆ ಕಂಡಿಕೆ–14ರಲ್ಲಿನ ವಿಧಾನಗಳು ಅನ್ವಯಿಸುತ್ತದೆ.

**ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಇವುಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ:**

21. ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಇವುಗಳಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡುವಾಗ ನಗರಾಭಿವೃದ್ಧಿ ಇಲಾಖೆಯು ಲಿಂಕ್ ಡಾಕ್ಯುಮೆಂಟ್‌ನಲ್ಲಿ ತೋರಿಸಿರುವ ಹಂಚಿಕೆಗಳನ್ನು ಬಿಡುಗಡೆ ಆದೇಶಗಳಲ್ಲಿ ಸೇರಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

**ವೆಚ್ಚ ಹಿಂಬರಿಸಬಹುದಾದ ಯೋಜನೆಗಳು – ಬಾಹ್ಯ ನೆರವಿನ ಯೋಜನೆಗಳು/ಆರ್.ಐ.ಡಿ.ಎಫ್/ಎ.ಐ.ಬಿ.ಪಿ**

22. ಆರ್ಥಿಕ ಇಲಾಖೆಯ ಸಹಮತಿ ಇದೆಯೆಂದು ಭಾವಿಸಿ ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಆಯವ್ಯಯ ಅವಕಾಶದ ಶೇ.25ನ್ನು ಬಿಡುಗಡೆ ಮಾಡಬಹುದಾಗಿದೆ. ಈ ರೀತಿ ಬಿಡುಗಡೆ ಮಾಡುವಾಗ ಪ್ರಾರಂಭಿಕ ಶಿಲ್ಕು ಸೇರಿದಂತೆ ಹಿಂದಿನ ಬಿಡುಗಡೆಗಳ ಕನಿಷ್ಠ ಶೇ.75 ರಷ್ಟು ವೆಚ್ಚವಾಗಿರುವುದನ್ನು ಹಾಗೂ ವೆಚ್ಚ ಹಾಗೂ ಅದಕ್ಕೆ ಸಂಬಂಧಿಸಿದಂತೆ ಮರುಪಾವತಿ ಕೋರಿ ಭಾರತ ಸರ್ಕಾರಕ್ಕೆ ಸಲ್ಲಿಸುವ ಕ್ಲೇಮಿನ ಅಂತರ ಒಂದು ತಿಂಗಳಿಗಿಂತ ಹೆಚ್ಚಾಗಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಮೊದಲ ಕಂತಿನ ಬಾಬ್ತು ಮರುಪಾವತಿ ಸ್ವೀಕೃತವಾಗಿರುವುದನ್ನು ಆಡಳಿತ ಇಲಾಖೆಯು ದೃಢೀಕರಿಸಿದ ನಂತರವೇ ಉಳಿದ ಕಂತಿನ ಹಣವನ್ನು ಬಿಡುಗಡೆ ಮಾಡಲು ಅಧಿಕಾರ ಲಭ್ಯವಾಗುತ್ತದೆ. ಈ ಕುರಿತು ಹೊರಡಿಸಲಾಗುವ ಸರ್ಕಾರದ ಆದೇಶಗಳಲ್ಲಿ ಮೇಲಿನ ಅಂಶಗಳು ಸೇರಿರತಕ್ಕದ್ದು.

**ಕೇಂದ್ರ ಪುರಸ್ಕೃತ ಯೋಜನೆಗಳು:**

23. **ಅನುಬಂಧ–1 ಎ, ಬಿ ಸಿ,** ಮತ್ತು ಡಿ ರಲ್ಲಿನ ಯೋಜನೆಗಳಿಗೆ ಹಣ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯ ಸಹಮತಿಯನ್ನು ಅಗತ್ಯವಾಗಿ ಪಡೆಯತಕ್ಕದ್ದು.

24. ಈ ತರಹದ ಯೋಜನೆಗಳಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲನ್ನು ಅಂಗೀಕೃತ ಮಾದರಿ ಹಂಚಿಕೆ ಅನ್ವಯ, ಕೇಂದ್ರದ ಪಾಲು ಸ್ವೀಕೃತವಾಗಿರುವ ಬಗ್ಗೆ ಆರ್ಥಿಕ ಇಲಾಖೆಯಿಂದ ತಿಳಿಸಲಾಗುವ ಜಮಾ

ದೃಢೀಕರಣ ಪತ್ರದ ಪ್ರಕಾರ ಆಯವ್ಯಯ ಲಭ್ಯತೆಗೊಳಪಟ್ಟು ಬಿಡುಗಡೆ ಮಾಡಬಹುದು. **ಆದರೆ, ಕೆಲವು ಆಡಳಿತ ಇಲಾಖೆಗಳು ಕೇಂದ್ರದಿಂದ ಬಿಡುಗಡೆಯನ್ನು ನಿರೀಕ್ಷಿಸಿ ತಮ್ಮ ಹಂತದಲ್ಲಿಯೇ ಕೇಂದ್ರ ಮತ್ತು ರಾಜ್ಯದ ಪಾಲಿನ ಬಿಡುಗಡೆ ಮಾಡುತ್ತಿರುವುದು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಿದ್ದು, ಇದನ್ನು ತಕ್ಷಣದಿಂದ ನಿಲ್ಲಿಸುವುದು. ತದ ನಂತರದಲ್ಲಿ ಇಂತಹ ಯಾವುದೇ ಪ್ರಕರಣಗಳು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಲ್ಲಿ ಆ ಯೋಜನೆಯಡಿ ಮುಂದಿನ ಬಿಡುಗಡೆಗಳನ್ನು ನಿಲ್ಲಿಸಲಾಗುವುದು ಮತ್ತು ಈ ಸಂಬಂಧ ನೀಡಿರುವ ಆರ್ಥಿಕ ಅಧಿಕಾರವನ್ನು ಹಿಂಪಡೆಯಲಾಗುವುದು.** ಬಿಡುಗಡೆ ಸಂಬಂಧ ಹೊರಡಿಸುವ ಸರ್ಕಾರಿ ಆದೇಶವು ಮಾದರಿ ಹಂಚಿಕೆಯ ವಿವರಗಳು, ಹಿಂದಿನ ಕೇಂದ್ರ ಮತ್ತು ರಾಜ್ಯ ಪಾಲಿನ ಬಿಡುಗಡೆಗಳು, ರಾಜ್ಯ ಸರ್ಕಾರಕ್ಕೆ ಜಮೆಯಾದ ಕೇಂದ್ರದ ಸ್ವೀಕೃತಿಗಳು ಮತ್ತು ಇದಕ್ಕನುಗುಣವಾಗಿ ಬಿಡುಗಡೆಗೊಳಿಸಲು ಉದ್ದೇಶಿಸಿರುವ ರಾಜ್ಯದ ಪಾಲು – ಈ ವಿವರಗಳನ್ನು ಒಳಗೊಂಡಿರಬೇಕು.

25. ಭಾರತ ಸರ್ಕಾರದಿಂದ ಕೇಂದ್ರದ ಪಾಲಿನ ಹಣ ಬಿಡುಗಡೆಯಾಗಿದ್ದು ರಾಜ್ಯ ಸರ್ಕಾರದ ಲೆಕ್ಕಕ್ಕೆ ಜಮೆಯಾಗುವ ಮುನ್ನ ಕೇಂದ್ರ ಮತ್ತು ರಾಜ್ಯದ ಪಾಲಿನ ಹಣವನ್ನು ಬಿಡುಗಡೆ ಮಾಡಬೇಕಾದಲ್ಲಿ, ಪ್ರಸ್ತಾವನೆಗಳನ್ನು ಆರ್ಥಿಕ ಇಲಾಖೆಯ ವಿಶೇಷಾಧಿಕಾರಿ (ಎಫ್.ಆರ್.ಸಿ ಮತ್ತು ಸಿ.ಸಿ.) ಯವರಿಗೆ ಕಳುಹಿಸತಕ್ಕದ್ದು. ಭಾರತ ಸರ್ಕಾರದಿಂದ ಬಿಡುಗಡೆಗೊಂಡ ಹಣದ ಆದೇಶ ಮತ್ತು ಆಯವ್ಯಯ ಅನುದಾನದ ಲಭ್ಯತೆಯ ವಿವರಗಳನ್ನು ಪ್ರಸ್ತಾವನೆಗಳು ಒಳಗೊಂಡಿರಲೇಬೇಕು.

26. ಲಭ್ಯವಿರುವ ಆಯವ್ಯಯ ಅನುದಾನವು ಕೇಂದ್ರ ಮತ್ತು ರಾಜ್ಯದ ಪಾಲನ್ನು ಬಿಡುಗಡೆಗೊಳಿಸಲು ಸಾಕಾಗದಿದ್ದಲ್ಲಿ, ಮೇಲೆ (1) ರಲ್ಲಿ ಓದಲ್ಪಟ್ಟ ಸರ್ಕಾರಿ ಆದೇಶದಂತೆ ಪುನರ್ವಿನಿಯೋಗ ಅಥವಾ ಪೂರಕ ಅಂದಾಜುಗಳಲ್ಲಿ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸಬೇಕು.

**ಕೇಂದ್ರ ಹಣಕಾಸು ಆಯೋಗ ಅನುದಾನಗಳು**

27. ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡುವ 14ನೇ ಆರ್ಥಿಕ ಆಯೋಗದ ಅನುದಾನಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಮೂಲಭೂತ ಅನುದಾನ ಮತ್ತು ಸಾಮಾನ್ಯ ಕಾರ್ಯಕ್ಷಮತೆ ಅನುದಾನಗಳಿಗೆ ಯಾವುದೇ ಕ್ರಿಯಾ ಯೋಜನೆಯ ಅನುಮೋದನೆ ಅಗತ್ಯವಿರುವುದಿಲ್ಲ ಮತ್ತು ಅನುದಾನ ಸ್ವೀಕೃತಿಯಾದ 15 ದಿನಗಳೊಳಗೆ ಈ ಮೊತ್ತವನ್ನು ಬಿಡುಗಡೆ ಮಾಡತಕ್ಕದ್ದು.

**ಭಾಗ V- ಲೇಖಾನುದಾನ ಮಿತಿ:**

28. ಈ ಆದೇಶದಲ್ಲಿನ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯು ಮೇಲೆ (3) ರಲ್ಲಿ ಓದಲಾದ ಅಧಿಕೃತ ಜ್ಞಾಪನದಲ್ಲಿ ನಮೂದಿಸಿದ ಲೇಖಾನುದಾನ ಮಿತಿಗೆ ಒಳಪಟ್ಟಿದೆ. ಆಡಳಿತ ಇಲಾಖೆಯು ಈ ಆರ್ಥಿಕ

ವರ್ಷದ ಪೂರ್ಣ ಆಯವ್ಯಯ ಅನುಮೋದನೆಯಾಗುವವರೆಗೆ ಮಾಡುವ ಒಟ್ಟು ಬಿಡುಗಡೆಯು, ಆ ಇಲಾಖೆಯ ಬೇಡಿಕೆಯೆದುರು ಅನುಮೋದನೆಗೊಂಡಿರುವ ಒಟ್ಟು ಲೇಖಾನುದಾನ ಮಿತಿಗೆ ಒಳಪಟ್ಟಿರತಕ್ಕದ್ದು.

29. ಸುಲಭ ಕಾರ್ಯಾಚರಣೆಗಾಗಿ, ಒಂದು ಯೋಜನೆಯ ಒಟ್ಟು ಆಯವ್ಯಯದ ಮೂರನೇ ಒಂದು ಭಾಗವನ್ನು (ಲೇಖಾನುದಾನದ ಮಿತಿ) ಬಿಡುಗಡೆ ಮಾಡಬಹುದಾಗಿರುತ್ತದೆ. ಪೂರ್ಣ ಆಯವ್ಯಯ ಅನುಮೋದನೆಗೊಳ್ಳುವ ಮೊದಲೇ ಯಾವುದೇ ಒಂದು ಯೋಜನೆಗೆ ಈ ಮಿತಿಯನ್ನು ಮೀರಿ ಹಣ ಬಿಡುಗಡೆ ಮಾಡಬೇಕಾದ ಸಂದರ್ಭದಲ್ಲಿ, ಆಡಳಿತ ಇಲಾಖೆಯು, ತನ್ನ ಬೇಡಿಕೆಯ ಕೆಳಗೆ ಅದೇ ವಿಧದ(ರಾಜಸ್ವ ಅಥವಾ ಬಂಡವಾಳ) ಬೇರೆ ಯೋಜನೆಯಡಿ ಅಥವಾ ಯೋಜನೆಗಳಡಿ ಸಮಾನ ಮೊತ್ತವನ್ನು ಕಡಿತಗೊಳಿಸಲು ಗುರುತಿಸಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು. ಇದರಿಂದ ಒಟ್ಟಾರೆ ಬೇಡಿಕೆಯಡಿ ಲೇಖಾನುದಾನ ಮಿತಿಯನ್ನು ಮೀರಿದಂತಾಗುವುದಿಲ್ಲ.

**ಭಾಗ–VI–ಸಾಮಾನ್ಯ ಸೂಚನೆಗಳು**

**ಎಸ್‌ಸಿಎಸ್‌ಪಿ/ಟಿಎಸ್‌ಪಿಮತ್ತು ಎಸ್.ಡಿ.ಪಿಗೆ ಸಂಬಂಧಿಸಿದಂತೆ ಬಿಡುಗಡೆಗಳು:**

30. ಆಯಾ ಯೋಜನೆಯಡಿ ಮಾಡುವ ಪ್ರತಿಯೊಂದು ಬಿಡುಗಡೆಗೆ ಅನುಗುಣವಾಗಿ(pro-rata manner) ಎಸ್‌ಸಿಎಸ್‌ಪಿ/ಟಿಎಸ್‌ಪಿ ಮತ್ತು ಎಸ್.ಡಿ.ಪಿಗೆ ಸಹ ಬಿಡುಗಡೆ ಮಾಡತಕ್ಕದ್ದು. ನಿರ್ದಿಷ್ಟ ಪ.ಜಾ.ಉ.ಯೋ ಮತ್ತು ಗಿ.ಉ.ಯೋ ಯೋಜನೆಗಳಿಗೆ ಸಂಬಂಧಿಸಿದಂತೆ ಯೋಜನೆಗಳು ರಾಜ್ಯ ವಲಯ, ಕೇ.ಪು.ಯೋ, ಜಿಲ್ಲಾ ವಲಯ ಅಥವಾ ನಗರ ಸ್ಥಳೀಯ ಸಂಸ್ಥೆಗೆ ಸಂಬಂಧಿಸಿದ್ದಲ್ಲಿ ಈ ಆದೇಶದಲ್ಲಿನ ಅದಕ್ಕೆಸಂಬಂಧಿಸಿದ ಕಂಡಿಕೆಯನ್ನು ಅನುಸರಿಸಿ ಬಿಡುಗಡೆ ಮಾಡತಕ್ಕದ್ದು.

31. ಹಾಗೆಯೇ, ಆರ್ಥಿಕ ಇಲಾಖೆಯ ಅನುಮೋದನೆ ಅಗತ್ಯವಿರುವ ಈ ಆದೇಶದ ಅನುಬಂಧ–1ಎ,1ಬಿ, ಮತ್ತು 1ಸಿ ರಲ್ಲಿ ಸೂಚಿಸಿರುವ ಯೋಜನೆಗಳಿಗೆ ಸಹಾ ಎಸ್‌ಸಿಎಸ್‌ಪಿ/ಟಿಎಸ್‌ಪಿ ಮತ್ತು ಎಸ್.ಡಿ.ಪಿಗೆ ಸಂಬಂಧಿಸಿದಂತೆ ಬಿಡುಗಡೆಗಳನ್ನು ಈ ಆದೇಶದ ಸೂಕ್ತ ಕಂಡಿಕೆಗಳಲ್ಲಿ ತಿಳಿಸಿರುವ ವಿಧಾನಗಳನ್ನನುಸರಿಸಿ ಮಾಡಬಹುದಾಗಿದೆ.

**ಮರುಪಾವತಿ ಕ್ಲೇಮುಗಳ ಮತ್ತು ಬಳಕೆ ಪ್ರಮಾಣಪತ್ರಗಳ ಸಲ್ಲಿಕೆ**

32. ಭಾರತ ಸರ್ಕಾರಕ್ಕೆ, ಬಾಹ್ಯ ನಿಧಿ ಪೂರೈಕೆ ಏಜೆನ್ಸಿಗಳಾದ ವಿಶ್ವ ಬ್ಯಾಂಕ್, ಎ.ಡಿ.ಬಿ., ಜೆ.ಐ.ಸಿ.ಎ., ಮುಂತಾದವುಗಳಿಗೆ ಹಾಗೂ ಕಂಡಿಕೆ 22 ರಲ್ಲಿ ಉಲ್ಲೇಖಗೊಂಡ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ದೇಶೀಯ ಆರ್ಥಿಕ ಸಂಸ್ಥೆಗಳಾದಂತಹ ನಬಾರ್ಡ್ ಮುಂತಾದವುಗಳಿಗೆ ಮರುಪಾವತಿ ಕ್ಲೇಮುಗಳ ಮತ್ತು ಬಳಕೆ ಪ್ರಮಾಣಪತ್ರಗಳ ಸಲ್ಲಿಕೆಯಾಗಬೇಕಾದ ಯೋಜನೆಗಳಿಗೆ ಸಂಬಂಧಿಸಿದಂತೆ, ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು, ಈ ಯೋಜನೆಗಳ ನೈಜ ವೆಚ್ಚ ಮತ್ತು ಮರುಪಾವತಿ ಕ್ಲೇಮುಗಳ ಅಥವಾ ಬಳಕೆ ಪ್ರಮಾಣಪತ್ರಗಳ ಸಲ್ಲಿಕೆ ನಡುವಿನ ಸಮಯದ

ಅಂತರವು 1 ತಿಂಗಳ ಮೇಲಾಗದಂತೆ ಮತ್ತು ಕ್ಲೇಮುಗಳ ಮತ್ತು ಮುಂದಿನ ಕಂತಿನ ಬಿಡುಗಡೆಗಳನ್ನು ಭಾರತ ಸರ್ಕಾರ/ಸಂಬಂಧಿತ ನಿಧಿಪೂರೈಕೆ ಏಜೆನ್ಸಿಗಳೊಂದಿಗೆ ತ್ವರಿತವಾಗಿ ಹಿಂಬಾಲಿಕಾ ಕ್ರಮ ವಹಿಸಬೇಕಾಗುತ್ತದೆ.

**ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆ**

33. ಸಹಾಯಾನುದಾನಗಳಿಗೆ ನೀಡುವ ಅನುದಾನಗಳನ್ನು ಹೊರತುಪಡಿಸಿ ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆಯದೆ ಯಾವುದೇ ಯೋಜನೆಯ ಮೊತ್ತವನ್ನು ವೈಯಕ್ತಿಕ ಠೇವಣಿ ಖಾತೆಗೆ ಅಥವಾ ಬ್ಯಾಂಕ್ ಖಾತೆಗೆ ಜಮೆ ಮಾಡುವಂತಿಲ್ಲ.

34. ಅನುಷ್ಠಾನ ಸಂಸ್ಥೆಯ/ ಅಧಿಕಾರಿಯ ಬ್ಯಾಂಕ್ ಖಾತೆ ಅಥವಾ ವೈಯಕ್ತಿಕ ಠೇವಣಿ ಖಾತೆಗೆ ಒಂದು ನಿರ್ದಿಷ್ಟ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಣವನ್ನು ಜಮೆ ಮಾಡಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆದಿದ್ದರೂ ಸಹ, ಅದನ್ನು ಆರ್ಥಿಕ ಪ್ರತ್ಯಾಯೋಜನೆಯ ಅಧಿಕಾರವನ್ನು ಚಲಾಯಿಸುವುದರಿಂದ ವಿನಾಯಿತಿ ಎಂದು ಪರಿಭಾವಿಸುವಂತಿಲ್ಲ. ಆದೇಶ ಸಂಖ್ಯೆ: ಆಇ 5 ಟಿಎಆರ್ 2017 ದಿನಾಂಕ:30.1.2017ರಲ್ಲಿ ವಿಧಿಸಿರುವ ಷರತ್ತು ಹಾಗೂ ಸೂಚನೆಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಆಡಳಿತ ಇಲಾಖೆಗಳು ತಪ್ಪದೇ ಖಚಿತಪಡಿಸಿಕೊಳ್ಳುವುದು.

35. ಕೇಂದ್ರ ಅಥವಾ ರಾಜ್ಯದ ಯಾವುದೇ ಕಾರ್ಯಕ್ರಮದಡಿ ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆಯ ಮುಖಾಂತರ **ನಿರ್ವಹಿಸಲು ಆರ್ಥಿಕ ಇಲಾಖೆಯಿಂದ ನಿರ್ದಿಷ್ಟ ಅನುಮತಿ ಪಡೆದಂತಹ ಯೋಜನೆಗಳ ಅನುಷ್ಠಾನ ಅಧಿಕಾರಿಗಳಿಗೆ** ಹಣ ಬಿಡುಗಡೆ ಮಾಡಬೇಕಾದಲ್ಲಿ, ಹಿಂದೆ ಬಿಡುಗಡೆಯಾದ ಹಣದಲ್ಲಿ, ಅನುಷ್ಠಾನ ಸಂಸ್ಥೆ/ಅಧಿಕಾರಿಯ ವೈಯಕ್ತಿಕ ಠೇವಣಿ ಖಾತೆ/ಬ್ಯಾಂಕ್ ಖಾತೆಯಲ್ಲಿನ ಆರಂಭಿಕ ಶಿಲ್ಕನ್ನೂ ಒಳಗೊಂಡಂತೆ, ಈವರೆಗೆ ಬಿಡುಗಡೆ ಮಾಡಿರುವ ಹಣದಲ್ಲಿ ಶೇ.75 ರಷ್ಟು ಹಣವನ್ನು ಉಪಯೋಗಿಸಿಕೊಂಡಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು. ಹಣ ಬಿಡುಗಡೆಯ ಸರ್ಕಾರಿ ಆದೇಶವು ಈ ಕೆಳಕಂಡ ಅಂಶಗಳನ್ನು ತಪ್ಪದೇ ಒಳಗೊಳ್ಳತಕ್ಕದ್ದು ಹಾಗೂ ಈ ಅಂಶಗಳನ್ನು ನಮೂದಿಸದೇ ಇದ್ದಲ್ಲಿ ಖಜಾನೆಯು ಅಂತಹ ಆದೇಶಗಳನ್ನು ಅಂಗೀಕರಿಸುವುದಿಲ್ಲ.

- ಆರಂಭಿಕ ಶಿಲ್ಕು
- ಇತ್ತೀಚಿನ ಸರ್ಕಾರಿ ಆದೇಶದವರೆಗೆ ಮಾಡಿದ ಬಿಡುಗಡೆಗಳು
- ಲಭ್ಯವಿರುವ ಒಟ್ಟು ಮೊತ್ತ
- ಆಗಿರುವ ವೆಚ್ಚ
- ಲಭ್ಯವಿರುವ ಮೊತ್ತಕ್ಕೆ ಶೇಕಡಾವಾರು ವೆಚ್ಚ

**ಆರ್ಥಿಕ ಇಲಾಖೆಗೆ ಮಾಹಿತಿ:**

36. ಆಡಳಿತ ಇಲಾಖೆಗಳು ಈ ಆರ್ಥಿಕ ಪ್ರತ್ಯಾಯೋಜನೆಗಳನ್ವಯ ಹೊರಡಿಸುವ ಹಣ ಬಿಡುಗಡೆ ಆದೇಶದ ಪ್ರತಿಗಳನ್ನು ತಪ್ಪದೇ ಆರ್ಥಿಕ ಇಲಾಖೆಯ ಸಂಬಂಧಿತ ವೆಚ್ಚ ಶಾಖೆಗಳಿಗೆ ಕಳುಹಿಸುವುದು.

**ಖಜಾನೆ ಇಲಾಖೆಯ ಪಾತ್ರ:**

37. ಈ ಸಂಬಂಧ ಕಂಡಿಕೆ 35 ರಲ್ಲಿ ತಿಳಿಸಿದಂತೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿರುವುದನ್ನು ಮನಗಂಡ ಹೊರತು ಖಜಾನೆ ಇಲಾಖೆಯು ಆಡಳಿತ ಇಲಾಖೆಗಳು ಸಲ್ಲಿಸುವ ಬಿಲ್ಲುಗಳನ್ನು ಅಂಗೀಕರಿಸತಕ್ಕದ್ದಲ್ಲ ಅಥವಾ ಹಣ ಬಿಡುಗಡೆ ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಅನಿಲ್ ಕುಮಾರ್ ಝಾ)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆ.ಮತ್ತು ಸಂ.)
ಆರ್ಥಿಕ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369. ಬೆಂಗಳೂರು.
2.ಪ್ರಧಾನ ಮಹಾಲೇಖಪಾಲರು (ಜಿಎಸ್‌ಎಸ್‌ಎ), ರೆಸಿಡೆನ್ಸಿ ರಸ್ತೆ, ಅಂಚೆ ಪಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3.ಪ್ರಧಾನ ಮಹಾಲೇಖಪಾಲರು (ಇ.ಆರ್.ಎಸ್.ಎ) ರೆಸಿಡೆನ್ಸಿ ರಸ್ತೆ, ಅಂಚೆ ಪಟ್ಟಿಗೆ 5329/5369, ಕರ್ನಾಟಕ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
9. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
10. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು
11. ಆರ್ಥಿಕ ಇಲಾಖೆಯ ಎಲ್ಲಾ ಶಾಖೆಗಳಿಗೆ
12. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
13. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ಬೆಂಗಳೂರು.
14. ಬಿಡಿ ಪ್ರತಿ / ಶಾ.ರ.ಕ.

**(FY 2019-20)**

**Annexure-1A : State sector schemes**

List of Schemes for which Finance Department's
Prior concurrence is necessary for release of funds

**(For release of SCSP/TSP if present in these schemes, para 30 & 31, will apply)**

| Demand No. & Dept. | Scheme HoA | Nomenclature |
|---|---|---|
| 01. Agriculture and Horticulture | 4401-00-108-0-01 | Development of Agriculture Technical Clusters in Kolar, Chitradurga, Koppal and Gadag Districts on Israel Model |
| | 4401-00-108-0-02 | Development of Horticulture Technical Clusters in Karwar, Tumkur, Yadgir and Dharwad Districts on Israel Model |
| | 4401-00-102-0-01 | Revolving fund |
| | 4401-00-113-0-01 | Capital Expenses on Other Agriculture Schemes |
| | 2401-00-102-0-29 | Revolving Fund |
| | 2401-00-800-1-71 | Additional provision for salaries |
| | 2401-00-119-1-05 | Assistance to fruit crops farmers |
| 03. Finance | 2235-04-101-0-01 | Loan Waiver to Farmers |
| 05. Transport | 3055-00-800-0-15 | Auto and taxi drivers welfare authority |
| | 5055-00-050-0-06-132 | Housing scheme for auto and taxi drivers |
| 07.RDPR | 4702-00-101-1-14 | Repairs and rejuvenation of tanks (Jalamrutha) |
| 08. Forest | 4406-01-101-0-01-132 | Railway barricade to prevent man-animal conflict |
| | 2406-04-103-1-04 | Net present value of forest land (CAMPA) |
| | 2406-04-103-1-01 | Compensatory afforestation (CAMPA) |
| | 2406-04-103-1-03 | Intrigued wild life management plan (CAMPA) |
| 09. Co-operation | 3475-00-107-0-20 | Minimum floor price scheme |
| | 2425-00-107-2-56 | Loan waiver scheme |
| 10. BC Welfare | 2225-03-190-0-06 | Krantiveera Sangolli Rayanna Prathistana |
| 10. Minority Welfare | 2225-03-277-2-64 | Moulana Azad Trust |
| | 4225-04-190-0-01-211 | Christian development Corporation |
| 16.Housing | 2216-03-104-0-01-106 | Ashraya Basava Vasathi |
| | 2216-02-101-0-07-059 | Vajapayee Urban Housing Schemes |
| 17-Education | 2203-00-112-0-06 | Hassan technical university |

| | | |
|---|---|---|
| 18.Commerce& Industries | 4852-80-004-0-01 | Industrial infrastructure for institutions |
| | 4851-00-102-0-20-211 | Development of Industrial Infrastructure of MSMEs |
| | 4851-00-800-6-01 | Housing scheme for garment workers |
| | 6860-05-190-1-00 | Loans to MPM Ltd. |
| | 2852-80-102-0-04 | Compete with China Programs |
| | 4860-60-600-0-02 | Compete with China Programs |
| | 4860-04-190-1-00-211 | My Sugar (Joint Sector Development) |
| | 2851-00-106-0-12 | Assistance to Coir sector (Tengu Bhagya) |
| | 2851-00-102-0-84 | Establishment and improvement of industrial clusters |
| 19.Urban Development | 4217-60-800-5-02-059 | Reimbursement of Taxes & Duties to BMRCL |
| | 3604-00-191-2-00<br>3604-00-192-2-00<br>3604-00-193-2-00 | Untied grants |
| | 4217-01-800-0-02-132 | Capital support to special infrastructure projects of Bangalore |
| | 2217-05-800-0-07 | Cash loss of BMRCL |
| | 4217-01-800-0-05-132 | Peripheral Ring Road |
| | 4217-60-800-0-04-032 | Bengaluru Sub-urban rail system |
| | 4217-60-800-4-04 | Special Package for Development of Mandya |
| 20. Public Works | 4059-80-051-0-32 | Court buildings |
| | 4216-01-700-2-24 | Judicial Officers residential buildings |
| | 5054-80-190-0-03 | Elevated Road Corridor in Bengaluru by KRDCL |
| | 5054-05-337-4-02-154 | Nala barricading |
| 21. Water Resource Department | 4701-80-190-3-01-132 | Land acquisition charges & settlement of claims |
| 22. Medical Education | 4210-03-105-1-21 | Establishment of medical college at kanakapur |
| 24. Energy | 2801-80-101-1-04 | Subsidy for supply to IP sets, BJ/KJ consumers |
| 26. Planning, Statistics, Science & Technology | 2575-60-265-0-03 | Article 371J-Hyderabad Karnataka Region Development |
| | 4575-60-800-0-02 | Article 371J-Hyderabad Karnataka Region Development |
| | 4575-60-800-0-01 | Legislators Constituency Development Fund |
| | | |

| Vacant post provision under various demands. | | |
|---|---|---|
| 01. Agriculture and Horticulture | 2401-00-800-1-70 | Vacant Post Provision |
| 02.Animal Husbandry and Fisheries | 2403-00-800-0-40 | Vacant Post Provision |
| 03.Department of Personnel & Administrative Reforms | 2052-00-090-0-27 | Vacant Post Provision |
| 05.Home and Transport | 2055-00-001-0-07 | Vacant Post Provision |
| 07.Rural Development &Panchayati Raj | 2515-00-800-0-19 | Vacant Post Provision |
| 08.Forest | 2406-01-800-0-16 | Vacant Post Provision |
| 09.Cooperation | 2425-00-800-0-04 | Vacant Post Provision |
| | 6425-00-107-5-10 | Loan waiver scheme |
| 10.Social Welfare | 2225-01-800-0-22 | Vacant Post Provision |
| 11.Women and Child Development | 2235-60-001-0-03 | Vacant Post Provision |
| 12. Information, Tourism and Youth Services | 2220-60-800-0-22 | Vacant Post Provision |
| 13.Food& Civil Supplies | 2408-01-800-0-12 | Vacant Post Provision |
| 14.Revene | 2053-00-093-0-01 | Vacant Post Provision |
| 15.Information Technology and Bio-Technology | 3451-00-800-0-09 | Vacant Post Provision |
| 17. Education | 2202-01-800-1-90 | Vacant Post Provision |
| 18. Commerce & Industries | 2851-00-800-0-02 | Vacant Post Provision |
| 19.Urban Development | 4215-01-190-0-01 | Vacant Post Provision |
| | 4215-02-106-0-01 | Vacant Post Provision |
| | 2217-05-800-0-11 | Vacant Post Provision |
| 20. Public Works | 2059-80-800-0-07 | Vacant Post Provision |
| Major Irrigation | 2701-80-001-0-21 | Vacant Post Provision |
| Medical Education | 2210-01-800-0-07 | Vacant Post Provision |
| 23.Labour | 2230-01-800-0-07 | Vacant Post Provision |
| 24. Energy | 2801-80-001-0-01 | Vacant Post Provision |
| 25.Kannada& Culture | 2205-00-001-0-03 | Vacant Post Provision |
| 26. Planning, Statistics, Science & Technology | 3454-01-800-0-04 | Vacant Post Provision |
| 27.Law | 2014-00-102-0-14 | Vacant Post Provision |
| | 2401-00-800-1-70 | Vacant Post Provision |

**Annexure 1B : Centrally sponsored Schemes**

| Demand No. & Dept. | Scheme HoA | Nomenclature |
|---|---|---|
| 01.Agriculture | 2402-00-102-0-30 | PradhanaMantriKrishiSinchayiYojane-Watershed Development |
| 20.Public Works | 5054-04-337-0-05-172 | Central Road Fund |
| 21. Water Resources<br><br>Minor Irrigation | (i)4701-73-800-0-01<br>(ii)4701-74-800-0-01<br><br>(i) 4702-00-101-1-15<br>(ii)4702-00-101-1-10 | Upper Krishna Project –AIBP<br>KNNL-AIBP<br><br>Har Khet ko Pani<br>AIBP |
| 22.Health& Family Welfare Department | 2210-03-800-0-18-059 | National Health Mission |

**Annexure 1 C :lumpsum in District sector**

**(* Funds under RDPR Schemes mentioned below are released by FD)**

| Demand No. & Dept. | Scheme HoA | Nomenclature |
|---|---|---|
| 17.Education Department | 2202-00-101-0-18<br>(2202-01-196-6-01) | Primary Education (MDM) |
| 16.Housing Department | 2216-00-102-0-14<br>(2216-80-198-6-02) | Indira AwasYojane |
| 7. RDPR (*) | 2515-00-101-0-26-001<br>2515-00-101-0-26-021<br>(2515-00-196-1-05) | Provision for vacant posts<br>Provision for Medical expenses |
| | 2515-00-102-0-63-001<br>2515-00-102-0-63-021<br>(2515-00-197-1-10) | Provision for vacant posts<br>Provision for Medical expenses |
| 7. RDPR (*) | 2515-00-101-0-30-021<br>(2515-00-196-1-05) | Re-imbursement of medical expenses |
| 7. RDPR (*) | 2515-00-103-0-94<br>(2515-00-198-1-10) | Royalty on sand mining to be passed on to GPs |
| 7. RDPR (*) | 2515-00-103-0-97<br>(2515-00-198-1-12) | Grants to GP for securitization of Electricity Arrears |
| 7. RDPR (*) | 3054-00-101-0-28-200<br>(3054-80-196-1-01) | Maintenance grants for Rural Roads |
| | 3054-00-101-0-29-172<br>(3054-80-196-1-03) | Mukhyamantri Grameena Raste Abhivrudhi Yojane |

**Annexure 1 D :lumpsum in District sector**

| Demand No & Dept | Scheme HoA | Nomenclature | Amount |
|---|---|---|---|
| 01. Agriculture and Horticulture | 2401-00-102-0-28 | Market special packages | 150.00 Crore |
| 10. Social Welfare | 4225-01-796-0-01 | Constitution museum at bengaluru | 20.00 Crore |

- * Only for releasing the amount provided for new announcement in above HOA prior concurrence of FD is required. The balance amount available under the above HOA may be released by AD as per relevant provisions in this order.

**Annexure – 2**

**List of items of expenditure for which funds can be released up to budget provision presuming concurrence of Finance Department.**

| | |
|---|---|
| 1 | Salary and Allowances |
| 2 | Travelling Allowance |
| 3 | Diet Charges |
| 4 | Building Expenses |
| 5 | Pension and Retirement Benefits |
| 6 | Scholarship & Stipends |
| 7 | Transport Expenses |
| 8 | Old Age Pensions and SandhyaSuraksha pension |
| 9 | Pension for Destitute Widows |
| 10 | Swatantra Sainik Samman Pension Scheme |
| 11 | Pension for Physically Challenged Persons |
| 12 | Purchase of medicines for hospitals, and veterinary institutions |
| 13 | Honorarium to guest lecturers in Higher Education Department |
| 14 | Remuneration to daily wagers as provided under object head - 033 |
| 15 | Payment to contractual or outsourced staff as provided under object head-034 |
| 16 | Provisions made under object head – 050- Office expenses |
| 17 | Provisions made under object head – 118- GIA pensions |
| 18 | Provisions made under object head – 115- GIA pensions |

| ANNEXURE - 3 | | |
|---|---|---|
| **List of Centrally Sponsored Schemes in District Sector (Paras 24-27) to be released by Concerned Administration Department** | | |
| **HOA** | **Description** | **LINKCODE** |
| 2202-00-101-0-18 | National programme for National Support to Primary Education (MDM) | 2202-01-196-6-01 |
| 2202-00-101-0-19 | SarvaShikshaAbhiyana Society | 2202-01-197-6-01 |
| 2202-00-102-0-20 | RMSA | 2202-02-196-6-01 |
| 2202-00-102-0-69 | RMSA Model Schools | 2202-02-197-6-01 |
| 2202-00-104-0-01 | Scheme for providing Education to Madarasas, Minorities and Disabled | 2202-80-196-6-02 |
| 2210-00-106-0-01 | District Family Welfare Bureau | 2211-00-196-6-02 |
| 2210-00-106-0-02 | Rural Family Welfare Centres at PHCs | 2211-00-196-6-05 |
| 2210-00-106-0-03 | Rural Sub-Centres (Opened Under Family Welfare) | 2211-00-196-6-06 |
| 2211-00-102-0-02 | ICDS-District Cell | 2235-02-196-6-01 |
| 2211-00-102-0-22 | Centrally Sponsored Scheme of Integrated Child Development Service | 2235-02-197-6-03 |
| 2215-00-102-0-91 | Swacha Bharat Mission | 2215-01-198-6-01 |
| 2216-00-102-0-14 | Pradhan MantriAwasYojana - Grameena | 2216-80-198-6-02 |
| 2225-00-101-0-02 | Scheme for Development of Scheduled Castes - Post Matric Scholarship | 2225-01-197-6-03 |
| 2225-00-101-0-06 | Centrally Sponsored Scheme of Book Banks of Medical and Engineering Colleges | 2225-01-196-6-06 |
| 2225-00-102-0-07 | Scheme for Development of Scheduled Tribes - Post Matric Scholarship | 2225-02-197-6-03 |
| 2225-00-102-0-08 | Centrally Sponsored Scheme of Book Bank for Scheduled Tribes Medical & Engineering Students | 2225-02-196-6-01 |
| 2225-00-102-0-09 | CSS Pre Matric Scholarship to ST Students(9th and 10th) | 2225-02-197-6-03 |
| 2230-00-101-0-01 | Rehabilitation of Bonded Labourers | 2230-01-198-6-01 |
| 2235-00-101-0-61 | ICDS - National Nutrition Mission | 2236-02-197-6-01 |
| 2435-00-101-0-03 | National Oil seed and Oil Palm Mission | 2401-00-196-6-13 |
| 2501-00-101-0-05 | National Rural Livelihood Mission - DRDA Administration Charges | 2501-01-198-6-03 |
| 2505-00-101-0-11 | National Rural Employment Guarantee Scheme | 2505-60-196-6-04 |
| 2515-00-101-0-01 | DRDA - Administrative Charges | 2515-00-196-6-06 |
| 2515-00-103-0-96 | XIV FCG Basic Grants | 2515-00-198-6-11 |
| 2515-00-103-0-99 | XIV FCG -Performance Grants | 2515-00-198-6-12 |
| 2810-00-101-0-01 | Bio - gas Development | 2810-00-196-6-01 |